**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ ನಾರಾಯಣಸ್ವಾಮಿ ಇವರ ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಉತ್ತರ.**

ವಿಷಯ:

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮದ ಸರ್ವೇ ನಂ.05 ರಲ್ಲಿರುವ ಒಟ್ಟು ವಿಸ್ತೀರ್ಣ 78 ಎಕರೆ 05 ಗುಂಟೆ ಸರ್ಕಾರಿ ಗೋಮಾಳದಲ್ಲಿ 52 ಎಕರೆ 25 ಗುಂಟೆ ಜಮೀನನ್ನು 1995ನೇ ಸಾಲಿನಲ್ಲಿ ಸಸ್ಯ ಕ್ಷೇತ್ರಕ್ಕೆಂದು ಅರಣ್ಯ ಇಲಾಖೆಯವರಿಗೆ ಮಂಜೂರು ಮಾಡಿದ್ದು, ಸದರಿ ಸಸ್ಯ ಕ್ಷೇತ್ರದಲ್ಲಿ ಇಲ್ಲಿಯವರೆವಿಗೂ ಯಾವುದೇ ಸಸಿಗಳನ್ನು ನೆಡದೆ ಮತ್ತು ಯಾವುದೇ ರೀತಿಯ ಅಭಿವೃದ್ಧಿಯನ್ನು ಸಹ ಮಾಡಿರುವುದಿಲ್ಲ. ಸಸ್ಯ ಕ್ಷೇತ್ರಕ್ಕೆ ಮೀಸಲಿಟ್ಟ ಪ್ರದೇಶದಲ್ಲಿ ಅನೇಕ ಅನಧಿಕೃತ ಕಟ್ಟಡಗಳು ತಲೆ ಎತ್ತುತ್ತಿರುವ ವಿಷಯದ ಬಗ್ಗೆ.

*****

ಉತ್ತರ:

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮದ ಸರ್ವೇ ನಂ.05 ರಲ್ಲಿರುವ ಒಟ್ಟು ವಿಸ್ತೀರ್ಣ 78 ಎಕರೆ 05 ಗುಂಟೆ ಸರ್ಕಾರಿ ಗೋಮಾಳದಲ್ಲಿ 52 ಎಕರೆ 25 ಗುಂಟೆ ಜಮೀನನ್ನು 1995ನೇ ಸಾಲಿನಲ್ಲಿ ಸಸ್ಯಕ್ಷೇತ್ರಕ್ಕೆಂದು ಕಂದಾಯ ಇಲಾಖೆಯು ಅರಣ್ಯ ಇಲಾಖೆಗೆ ಇದುವರೆವಿಗೂ ಹಸ್ತಾಂತರ ಮಾಡದೇ ಇರುವುದರಿಂದ, ಸದರಿ ಜಮೀನಿನಲ್ಲಿ ಅರಣ್ಯ ಇಲಾಖೆಯ ವತಿಯಿಂದ ಸಸ್ಯಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ. ಕಂದಾಯ ಇಲಾಖೆಯ ವಶದಲ್ಲಿರುವ ಸದರಿ ಜಮೀನಿನಲ್ಲಿ ಅನಧಿಕೃತ ಕಟ್ಟಡಗಳು ತಲೆಎತ್ತಿದ್ದಲ್ಲಿ ಅವುಗಳನ್ನು ತೆರವುಗೊಳಿಸುವ ಬಗ್ಗೆ ಕಂದಾಯ ಇಲಾಖೆಯೇ ಕ್ರಮಕೈಗೊಳ್ಳಬೇಕಾಗುತ್ತದೆ.

ಕಂದಾಯ ಇಲಾಖೆಯು ಸದರಿ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದಲ್ಲಿ ಮಾತ್ರ ಸದರಿ ಪ್ರದೇಶದಲ್ಲಿ ಸಸ್ಯೋದ್ಯಾನ / ಸಸ್ಯಕ್ಷೇತ್ರ ಹಾಗೂ ಇನ್ನಿತರೆ ಅರಣ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ.

ಸಂ: ಅಪಜೀ 05 ಎಫ್‌ಟಿಎಸ್ 2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು